ಪಿಡಬ್ಲ್ಯೂ-1

**<u>ದಿನಾಂಕಃ 29-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್.ಬಿ.ಎಸ್., ಆರೋಪಿ ಪರ ವಕೀಲರಿಂದಃ</u>**

**1.** ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿಗೆ ಸುಮಾರು 10 ಎಕರೆ ಜಮೀನು ಇರುತ್ತದೆ. ನಾನು 8 ಎಕರೆ ಅಡಿಕೆ ತೋಟ ಹೊಂದಿದ್ದು, ಅದು ಪುರಕೊಂಡಿಕೊಪ್ಪ, ತಾಃ ಹಿರೇಕೆರೂರ, ಜಿಃ ಹಾವೇರಿಯಲ್ಲಿದ್ದು ಅದರ ಸರ್ವೆ ನಂಬರ 15,17. ನಾನು ಹಾವೇರಿಯಲ್ಲಿ ಸಹ ಜಮೀನು ಹೊಂದಿದ್ದು ಅದರ ಸರ್ವೆ ನಂಬರ ನೆನಪಿಲ್ಲ. ಅದೇ ರೀತಿ ನಾನು ಹಾವೇರಿಯ ಬಸವೇಶ್ವರ ನಗರದ ಡಿ.ಸಿ. ಕಛೇರಿ ರಸ್ತೆಯಲ್ಲಿ ವಾಣಿಜ್ಯ ಮಳಿಗೆಯನ್ನು ಹೊಂದಿರುತ್ತೇನೆ. ಅಡಿಕೆ ತೋಟ ಹಾಗೂ ವಾಣಿಜ್ಯ ಮಳಿಗೆಯು ನನ್ನ ಸ್ವಂತ ಹೆಸರಿನಿಂದ ಇರುತ್ತದೆ.

**2.** ನಾನು ಅಡಿಕೆ ತೋಟದಿಂದ ಪ್ರತಿ ವರ್ಷ ಅಂದಾಜು ರೂ. 15.00 ಲಕ್ಷದವರೆಗೆ ಆದಾಯ ಹೊಂದಿರುತ್ತೇನೆ. ಅಡಿಕೆ ತೋಟಕ್ಕೆ ಪ್ರತಿ ವರ್ಷ ರೂ. 10.00 ರಿಂದ 12.00 ಲಕ್ಷ ಖರ್ಚು ಬರುತ್ತದೆ ಅಂದರೆ ಅಷ್ಟು ಬರುವುದಿಲ್ಲ ಅಂತಾ ಹೇಳುತ್ತಾರೆ. ವಾಣಿಜ್ಯ ಮಳಿಗೆಯಿಂದ ನನಗೆ ವರ್ಷಕ್ಕೆ ರೂ. 7-8 ಲಕ್ಷ ಆದಾಯ ಗಳಿಸುತ್ತಿದ್ದೇನೆ.

**3.** ನಾನು ನನ್ನ ಆದಾಯ ತೆರಿಗೆಯಲ್ಲಿ 2020 ನೇ ಸಾಲಿನಲ್ಲಿ ಈ ಪ್ರಕರಣದ ಆರೋಪಿಗೆ ರೂ. 9.00 ಲಕ್ಷ ಸಾಲ ನೀಡಿದ ವಿಷಯವನ್ನು ನಮೂದಿಸಿಲ್ಲ. ಆ ವಿಷಯ ನಮೂದಿಸಲು ಏನೂ ತೊಂದರೆ ಇತ್ತು ಅಂದರೆ ಸಾಕ್ಷಿ ಆಗ ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ ಅಂತಾ ಹೇಳುತ್ತಾರೆ. ನಾನು ಆದಾಯ ತೆರಿಗೆಯನ್ನು 2021 ರಿಂದ ತುಂಬುತ್ತಾ ಬಂದಿದ್ದೇನೆ.

**4.** ನನಗೆ 20 ವರ್ಷಗಳಿಂದ ಆರೋಪಿಯ ಪರಿಚಯವಿರುತ್ತದೆ. ನನಗೆ ಆರೋಪಿಯ ಪರಿಚಯ 20 ವರ್ಷಗಳಿಂದ ಇರುವುದಿಲ್ಲ ಆದರೂ ಸಹ ಇರುತ್ತದೆ

ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಬರುವ ಲಾಭದಲ್ಲಿ ನಾನು ಅನೇಕ ಜನರಿಗೆ ಹಣವನ್ನು ಕೊಡುವ ತೆಗೆದುಕೊಳ್ಳುವ ವ್ಯವಹಾರ ನಡೆಸುತ್ತೇನೆ ಅಂದರೆ ಸರಿಯಲ್ಲ. ನಾನು ಹಾವೇರಿ ನ್ಯಾಯಾಲಯದಲ್ಲಿ ಸಾಕಷ್ಟು ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಅಂದರೆ ಸಾಕ್ಷಿ 4-5 ಪ್ರಕರಣಗಳು ಇರಬಹುದು ಅಂತಾ ಹೇಳುತ್ತಾರೆ. ಅದೇ ರೀತಿ ಬೇರೆ ಬೇರೆ ನ್ಯಾಯಾಲಯದಲ್ಲಿಯೂ ಸಹ ನಾನು ದಾಖಲಿಸಿದ ಚೆಕ್ ಬೌನ್ಸ ಪ್ರಕರಣಗಳು ಇರುತ್ತವೆ ಅಂದರೆ ಸರಿ.

**5.** ನಾನು ಬಡ್ಡಿ ವ್ಯವಹಾರ ನಡೆಸುತ್ತೇನೆ ಅದು ನನ್ನ ಮೂಲ ಕಸುಬು ಆಗಿರುತ್ತದೆ ಅಂದರೆ ಸುಳ್ಳು. ನಾನು ರೈತರಿಗೆ ಹಾಗೂ ಬೇರೆಯವರಿಗೆ ಬಡ್ಡಿಯಲ್ಲಿ ಹಣ ನೀಡಿ ಅವರಿಂದ ಚೆಕ್‌ಗಳನ್ನು ಪಡೆಯುತ್ತೇನೆ ಅಂದರೆ ಸಾಕ್ಷಿ ಸುಳ್ಳು, ನನಗೆ ಬೇಕಾದವರಿಗೆ ಮಾತ್ರ ಅಂದರೆ ಆತ್ಮೀಯರಿಗೆ ಕೈಗಡ ಸಾಲ ನೀಡುತ್ತೇನೆ ಅಂತಾ ಹೇಳುತ್ತಾರೆ. ನಾನು ಆ ರೀತಿ ಕೈಗಡ ಸಾಲ ನೀಡಲು ಲೈಸೆನ್ಸ ಹೊಂದಿಲ್ಲ ಅಂದರೆ ಸಾಕ್ಷಿ ಅದಕ್ಕೆ ಲೈಸೆನ್ಸ ಅವಶ್ಯಕತೆ ಇಲ್ಲಾ ಅಂತಾ ಹೇಳುತ್ತಾರೆ. ನಾನು ಹಣದ ಲೇವಾದೇವಿ ವ್ಯವಹಾರ ಮಾಡುವ ಮೂಲ ಉದ್ಯೋಗ ಹೊಂದಿದ್ದು ಜನರಿಗೆ ಹಣ ನೀಡಿ ಅವರಿಂದ ಹೆಚ್ಚಿನ ಬಡ್ಡಿ ವಸೂಲ ಮಾಡಲು ಅವರು ಕಡೆಯಿಂದ ಚೆಕ್ ಪಡೆದು ಪ್ರಕರಣಗಳನ್ನು ದಾಖಲಿಸುತ್ತೇನೆ ಅಂದರೆ ಸುಳ್ಳು.

**6.** ಈ ಪ್ರಕರಣದ ಆರೋಪಿಯೊಂದಿಗೆ ಚೆಕ್‌ನ ವ್ಯವಹಾರ ನಡೆಯುವ ಮೊದಲು ಆತನ ಜಮೀನಿನ ಬಗ್ಗೆ ನನ್ನ ಮತ್ತು ಅವರ ಮಧ್ಯ ಸಂಚಗಾರ ಪತ್ರ ಆಗಿರುತ್ತದೆ. ನಾನು ಆರೋಪಿಯ ವಿರುದ್ಧ ನೋಂದಾಯಿತ ಸಂಚಗಾರ ಪತ್ರದ ಕುರಿತು ಬೇರೆ ಸಿವಿಲ್ ದಾವೆ ದಾಖಲಿಸಿಲ್ಲ.

**7.** 2018 ರಲ್ಲಿ ಆರೋಪಿ ಕೈಗಡ ಕೇಳಲು ಒಬ್ಬರೇ ಬಂದಿದ್ದರು. ಆರೋಪಿಯು ಯಾವ ದಿನಾಂಕದಂದು ಸಾಲ ಕೇಳಲು ಬಂದಿದ್ದ ಅಂತಾ ದಿನಾಂಕ ನೆನಪಿಲ್ಲ. ಆರೋಪಿ ಸಾಲ ಕೇಳಲು ಬಂದ ದಿನ ನಾನು ಮನೆಯಲ್ಲಿಯೇ ಇದ್ದೆ.

ಆರೋಪಿ ಆಗ ನನ್ನ ಜೊತೆ ಅರ್ಧ ಘಂಟೆ ಮಾತಾಡಿದ ಹಾಗೂ ಮನೆತನದ ಅಡಚಣೆ ಇದೆ ಅಂತಾ ಹೇಳಿದ. ಆರೋಪಿ ಮನೆತನದ ಏನೂ ಅಡಚಣೆ ಅಂತಾ ಸ್ಪಷ್ಟವಾಗಿ ನನ್ನ ಮುಂದೆ ಹೇಳಿಲ್ಲ. ನಾನು ದೂರಿನಲ್ಲಿ ಹೇಳಿದಂತೆ 2018 ರಲ್ಲಿ ಆರೋಪಿ ನನ್ನ ಮನೆಗೆ ಬಂದಿಲ್ಲ ಹಾಗೂ ನಾನು ಅತನಿಗೆ ಯಾವುದೇ ದುಡ್ಡು ನೀಡಿಲ್ಲ ಅಂದರೆ ಸುಳ್ಳು. ಆ ದಿನ ಆರೋಪಿಗೆ ಹಣ ಕೊಟ್ಟಿದ್ದೇನೆ ಎನ್ನುವ ಹಣ ಎಲ್ಲಿಂದ ಬಂತು, ಯಾರು ಕೊಟ್ಟಿದ್ದರು ಅಂದರೆ ಸಾಕ್ಷಿ ಆ ಹಣ ನಮ್ಮ ಮನೆಯಲ್ಲಿ ಇತ್ತು ನನಗೆ ಅಡಕೆ ವ್ಯಾಪಾರದಿಂದ ಹಣ ಬಂದಿದ್ದು, ಅದನ್ನು ಏಜೆಂಟ ಕೊಟ್ಟಿದ್ದರು, ಹಣ ಕೊಟ್ಟ ಏಜೆಂಟನ ಹೆಸರು ಈಗ ನೆನಪಿಲ್ಲ. ನಾನು ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ತನಗೆ ಬೇಕಾದ ಸಂಬಂಧಿಕರನ್ನು ಕರೆದುಕೊಂಡು ಬಾ ಅಂತಾ ಹೇಳಿಲ್ಲ, ಆತ ನನ್ನ ಆತ್ಮೀಯರು ಇರುವುದರಿಂದ ಆ ರೀತಿ ಹೇಳಿಲ್ಲ. ಆರೋಪಿಗೆ ಹಣ ನೀಡುವ ಕಾಲಕ್ಕೆ ನಮ್ಮ ಮನೆಯಲ್ಲಿ ನನ್ನ ಹೆಂಡತಿ ಇದ್ದಳು. ಸಾಮಾನ್ಯವಾಗಿ ರೈತಾಪಿ ವರ್ಗದವರು ಒಂದೇ ಬಾರಿಗೆ ರೂ. 9.00 ಲಕ್ಷ ಹಣ ಕೊಡುವ ಸ್ಥಿತಿ ಹೊಂದಿರುವುದಿಲ್ಲ, ಹೀಗಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ಯಾವ ಮುಖಬೆಲೆಗಳ ನೋಟುಗಳ ಮೂಲಕ ಹಣ ನೀಡಿರುತ್ತೇನೆ ಅಂತಾ ಈಗ ನೆನಪಿಲ್ಲ. ಆರೋಪಿಗೆ ಹಣ ನೀಡುವ ಕಾಲಕ್ಕೆ ಯಾವುದಾದರೂ ಕಂಡಿಷನ್ ಹಾಕಿದ್ದೀರಾ ಅಂದರೆ ಸಾಕ್ಷಿ 2 ವರ್ಷಗಳಲ್ಲಿ ಹಣ ಮರುಳಿಸುವಂತೆ ಕಂಡಿಷನ್ ಹಾಕಿದ್ದೇ. ಆರೋಪಿಗೆ ಕೈಗಡ ನೀಡುವ ಕಾಲಕ್ಕೆ ಆತನ ಬಳಿಯಿಂದ ಯಾವುದೇ ದಾಖಲೆ ಬರೆದುಕೊಂಡಿಲ್ಲ. ಕೈಗಡ ಪತ್ರ ಬರೆಸಿಕೊಂಡಿರುತ್ತೇನೆ. ಅದನ್ನು ಬಾಂಡ್ ಮೇಲೆ ಬರೆದುಕೊಂಡಿಲ್ಲ, ಆದರೆ ಆ ಬಗ್ಗೆ ಮಾಹಿತಿ ಇರಲಿಲ್ಲ ಹೀಗಾಗಿ ಬಿಳಿ ಹಾಳೆಯ ಮೇಲೆ ಬರೆದುಕೊಂಡಿರುತ್ತೇನೆ. ಅದನ್ನು ಟೈಪ ಮಾಡಿಸಿಕೊಂಡು ಸಹಿ ಪಡೆದಿರುತ್ತೇನೆ. ಅದನ್ನು ಯಾವಾಗ ಟೈಪ ಮಾಡಿರುತ್ತಾರೆ ಅಂತಾ ಗೊತ್ತಿಲ್ಲ. ಆರೋಪಿ ಅದನ್ನು ನನಗೆ ಕೊಡುವಾಗ ಟೈಪ ಮಾಡಿದ್ದು ಇತ್ತು. ನಾನು ಸದರಿ ಕೈಗಡ ಪತ್ರಕ್ಕೆ ಸಾಕ್ಷಿದಾರರ ಸಹಿ ಮಾಡಿಸುವಂತೆ ಕೇಳಿಕೊಂಡಿಲ್ಲ. ಕೈಗಡ ಪತ್ರಕ್ಕೆ ಸಾಕ್ಷಿ ಸಹಿ ಇಲ್ಲಾ, ಅದಕ್ಕೆ ಹಣ ನೀಡಲು ಏನಾದರೂ ನಿರಾಕರಿಸಿದ್ದೀರಾ ಅಂದರೆ ಸಾಕ್ಷಿ ಆತ ನನ್ನ ಆತ್ಮೀಯರು ಇರುವುದರಿಂದ ಆ ರೀತಿ ತೀರಸ್ಕರಿಸಿಲ್ಲ. ನಾನು ಈ

ಪ್ರಕರಣದೊಂದಿಗೆ ಕೈಗಡ ಪತ್ರವನ್ನು ಹಾಜರುಪಡಿಸಿಲ್ಲ. ಆ ದಾಖಲೆ ಹಾಜರಪಡಿಸಲು ಏನಾದರೂ ತೊಂದರೆ ಇತ್ತಾ ಅಂದರೆ ಸಾಕ್ಷಿ ಅದರ ಅವಶ್ಯಕತೆ ಬರಲಿಲ್ಲ ಅಂತಾ ಹೇಳುತ್ತಾರೆ.

**8.** ಸಾಲ ನೀಡಿದ ಎರಡು ವರ್ಷಗಳ ಬಳಿಕ ನಾನು ಆರೋಪಿ ಬಳಿಗೆ ಹೋಗಿ ಸಾಲ ಮರಳಿಸುವಂತೆ ಕೇಳಿರುತ್ತೇನೆ. ನಾನು ಆ ರೀತಿ ಆರೋಪಿಯ ಮನೆಗೆ ಹೋದ ಇಸವಿ ಹಾಗೂ ದಿನಾಂಕ ನೆನಪಿಲ್ಲ.

**9.** ನನ್ನ ಹಾಗೂ ಆರೋಪಿಯ ಮಧ್ಯ ರೂ. 9.00 ಲಕ್ಷಗಳ ವ್ಯವಹಾರ ಆಗಿರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಯಾವ ದಿನಾಂಕದಂದು ಚೆಕ್ ನೀಡಿರುತ್ತಾನೆ ಅಂತಾ ಈಗ ನೆನಪಿಲ್ಲ ಅದು ಕಾರ್ಪೋರೇಷನ್ ಬ್ಯಾಂಕ್‌ನ ಚೆಕ್ ಇರುತ್ತದೆ. ಆರೋಪಿ 2020 ನೇ ಸಾಲಿನ ಚೆಕ್ ನೀಡಿದ್ದ. ಆರೋಪಿ ಹಾವೇರಿಯ ಜೆ.ಹೆಚ್.ಪಟೇಲ್ ಸರ್ಕಲ್‌ನ ಟೀ ಶಾಪನಲ್ಲಿ ನನಗೆ ಚೆಕ್ ನೀಡಿರುತ್ತಾನೆ. ಚೆಕ್ ನೀಡುವ ಕಾಲಕ್ಕೆ ನನ್ನನ್ನು ಮತ್ತು ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಚೆಕ್‌ನ್ನು ಯಾರು ಬರೆದಿದ್ದರೂ ಅಂದರೆ ಸಾಕ್ಷಿ ಅದನ್ನು ಆರೋಪಿ ಟೈಪ ಮಾಡಿಸಿ ತಂದಿದ್ದರು ಅಂತಾ ಹೇಳುತ್ತಾರೆ. ಚೆಕ್‌ನಲ್ಲಿ ಟೈಪ ಮಾಡಿದ್ದರಿಂದ ಅದನ್ನು ನಾನು ತೀರಸ್ಕರಿಸಿಲ್ಲ. ಚೆಕ್‌ನಲ್ಲಿ ನಾನೇ ಟೈಪ ಮಾಡಿಸಿರುತ್ತೇನೆ ಅಂದರೆ ಸುಳ್ಳು. ಆರೋಪಿ ಚೆಕ್‌ಗೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾನೆ. ನಿಪಿ-1 ರ ಚೆಕ್‌ನ್ನು ಆರೋಪಿ ನನಗೆ 2020 ರಲ್ಲಿ ಕೊಟ್ಟಿಲ್ಲ ಅಂದರೆ ಸಾಕ್ಷಿ ನನಗೆ ಇಸ್ವಿ ನೆನಪಿಲ್ಲ ಅಂತಾ ಹೇಳುತ್ತಾರೆ. ನಿಪಿ-1 ರ ಚೆಕ್‌ನ್ನು ಅದರಲ್ಲಿ ಬರೆದ ದಿನಾಂಕಗಿಂತ 4-5 ವರ್ಷಗಳ ಮೊದಲು ಪಡೆದಿರುತ್ತದೆ ಅಂದರೆ ಸುಳ್ಳು.

**10.** ನಾನು ನಿಪಿ-1 ರ ಚೆಕ್‌ನ್ನು ಹಣ ಜಮಾ ಮಾಡಲು ಬ್ಯಾಂಕ್ ಆಫ್ ಬರೋಡಾಗೆ ಸಲ್ಲಿಸಿರುತ್ತೇನೆ. ದಿನಾಂಕ ನೆನಪಿಲ್ಲ. ನಾನು ಚೆಕ್ ಸಲ್ಲಿಸಿದ ಮರುದಿನ

ಮಾಹಿತಿ ಬಂದಿರುತ್ತದೆ. 2016-2017 ನೇ ಸಾಲಿನಲ್ಲಿ ನನ್ನ ಹಾಗೂ ಆರೋಪಿಯ ಮಧ್ಯ ಸಂಚಗಾರ ಪತ್ರ ಆಗಿರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಆ ವ್ಯವಹಾರಕ್ಕೆ ಹಾಗೂ ಈ ವ್ಯವಹಾರಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಹಾವೇರಿ ತಾಲ್ಲೂಕಿನ ಹೊಸಳ್ಳಿ ಗ್ರಾಮದ ಜಮೀನಿನ ಬಗ್ಗೆ ವ್ಯವಹಾರ ನಡೆದಾಗ ಆರೋಪಿ ನನಗೆ 3 ಚೆಕ್‌ಗಳನ್ನು ನೀಡಿದ್ದರು ಅಂದರೆ ಸುಳ್ಳು. ಆ ಸಂಚಗಾರ ಪತ್ರದಲ್ಲಿ ಆರೋಪಿಗೆ ಚೆಕ್ ಮೂಲಕ ನೀಡಿದ ಹಣದ ಕುರಿತು ಚೆಕ್‌ಗಳ ನಂಬರ ಬರೆದಿರುತ್ತೇನೆ. ಆದರೆ ಆ ವ್ಯವಹಾರ ಈ ವ್ಯವಹಾರ ಬೇರೆ ಬೇರೆ ಇರುತ್ತದೆ ಅಂತಾ ಹೇಳುತ್ತಾರೆ. ಆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ರೂ. 2.50 ಲಕ್ಷಗಳನ್ನು ಚೆಕ್‌ನಲ್ಲಿ ನೀಡಿ, ರೂ. 2.50 ಲಕ್ಷಗಳನ್ನು ನಗದು ಮೂಲಕ ನೀಡಿದ್ದೆ ಅಂದರೆ ಸಾಕ್ಷಿ ಅದು ಹಾಗೂ ಈ ವ್ಯವಹಾರ ಬೇರೆ ಬೇರೆ ಇರುತ್ತವೆ ಅಂತಾ ಹೇಳುತ್ತಾರೆ. ರೂ. 2.50 ಲಕ್ಷ ನಗದು ವ್ಯವಹಾರ ಮಾಡುವ ಕಾಲಕ್ಕೆ 3 ಚೆಕ್‌ಗಳನ್ನು ಆರೋಪಿ ಕಡೆಯಿಂದ ಸಹಿ ಮಾಡಿ ಪಡೆದಿರುತ್ತೇನೆ ಅಂದರೆ ಸಾಕ್ಷಿ ನನ್ನ ಬಳಿ ಇದೊಂದೇ ಚೆಕ್ ಇರುತ್ತದೆ ಅಂತಾ ಹೇಳುತ್ತಾರೆ. ಸಂಚಗಾರ ಪತ್ರ ಆಗುವ ಕಾಲಕ್ಕೆ ಆರೋಪಿ ಸಾಕ್ಷಿಗಳ ಸಮ್ಮುಖದಲ್ಲಿಯೇ 3 ಚೆಕ್‌ಗಳನ್ನು ಕೊಟ್ಟಿರುತ್ತಾನೆ ಅಂದರೆ ಸುಳ್ಳು. 3 ಚೆಕ್‌ಗಳ ಪೈಕಿ ಒಂದು ಚೆಕ್‌ನ ಮೇಲೆ ಬೇರೆಯವರ ಕಡೆಯಿಂದ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸುಳ್ಳು. ನಾನು ಬಡ್ಡಿ ವ್ಯವಹಾರ ನಡೆಸುವುದರಿಂದ ಸಿವಿಲ್ ದಾವೆ ದಾಖಲಿಸದೇ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಚೆಕ್ ಬೌನ್ಸ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಸಂಚಗಾರ ಪತ್ರಕ್ಕೆ ಸಹಿ ಮಾಡಿದ ಸಾಕ್ಷಿದಾರರು ಅನೇಕ ಬಾರಿ ನನ್ನನ್ನು ಏಕೆ ಈ ದೂರನ್ನು ದಾಖಲಿಸಿರುತ್ತೀರಾ ಅಂತಾ ಕೇಳಿರುತ್ತಾರೆ ಅಂದರೆ ಸುಳ್ಳು. ಆರೋಪಿ ಬರೆದುಕೊಟ್ಟ ಸಂಚಗಾರ ಪತ್ರದ ಅವಧಿ ಮೀರಿದ್ದರಿಂದ ಆ ಪ್ರಕರಣ ದಾಖಲಿಸಲು ಆಗುವುದಿಲ್ಲ ಅಂತಾ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

**11.** ನಿಪಿ-1 ರಲ್ಲಿರುವ ಸಹಿ 2016-2017 ರಲ್ಲಿ ಮಾಡಿದ ಸಹಿ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ ಅಂತಾ ಹೇಳುತ್ತಾರೆ. ನಿಪಿ-1 ರಲ್ಲಿರುವ ಸಹಿ 2020 ರ ಸಹಿ

ಇರುವುದಿಲ್ಲ ಅಂದರೆ ಸಾಕ್ಷಿ ನನ್ನ ಸಮಕ್ಷಮ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. ನನಗೆ ಸದರಿ ಪ್ರಕರಣದಲ್ಲಿ ಹಾಜರಪಡಿಸಿದ ಚೆಕ್ ನಂಬರ ಹೇಳಲು ಬರುವುದಿಲ್ಲ.

**12.** ಆರೋಪಿ ಯಾವ ಕಾಲಕ್ಕೂ ಹಣ ಕೇಳಿ ನಮ್ಮ ಮನೆಗೆ ಬಂದಿಲ್ಲ ಅಂದರೆ ಸುಳ್ಳು. 2020 ರಲ್ಲಿ ಆರೋಪಿ ಯಾವುದೇ ಚೆಕ್‌ನ್ನು ಸಹಿ ಮಾಡಿ ನನಗೆ ಕೊಟ್ಟಿಲ್ಲ ಅಂದರೆ ಸುಳ್ಳು. ಆರೋಪಿಗೆ ನಾನು ದೂರಿನಲ್ಲಿ ಹೇಳಿದಂತೆ ಕೈಗಡ ಸಾಲ ಅಂತಾ ಕೊಟ್ಟಿಲ್ಲ ಸಂಚಗಾರ ಪತ್ರ ಮಾಡುವ ಕಾಲಕ್ಕೆ ಆರೋಪಿ ಕೊಟ್ಟ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಸಂಚಗಾರ ಪತ್ರ ಮಾಡುವ ಕಾಲಕ್ಕೆ ನೀಡಿದ 3 ಚೆಕ್‌ಗಳಲ್ಲಿ 2 ಚೆಕ್‌ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಸಂಚಗಾರ ಪತ್ರದ ನಮೂದಿಸಿದ ಹಣಕ್ಕಿಂತ ಹೆಚ್ಚಿನ ಹಣ ಪಡೆಯಬೇಕು ಅಂತಾ ಬಡ್ಡಿ ಸೇರಿಸಿ ಇಲ್ಲಿ ನಾನು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ನಮ್ಮ ಸಂಬಂಧಿಕರಿಂದ ಇನ್ನೊಂದು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

**13.** ಆರೋಪಿಗೆ ನೋಟಿಸ್ ನೀಡಿದ ದಿನಾಂಕ ನೆನಪಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದರಿಂದ ಸುಮಾರು ಜನರ ಮೇಲೆ ಚೆಕ್ ಬೌನ್ಸ ಪ್ರಕರಣ ಮಾಡಿರುತ್ತೇನೆ ಅಂದರೆ ಸಾಕ್ಷಿ ಆತ್ಮೀಯರಿಗೆ ಕೈಗಡ ನೀಡಿರುತ್ತೇನೆ ಅಂತಾ ಹೇಳುತ್ತಾರೆ. ನಿಪಿ-1 ರ ಚೆಕ್‌ಗೂ ಹಾಗೂ ದೂರಿನಲ್ಲಿ ಬರೆದ ವ್ಯವಹಾರಕ್ಕೆ ಯಾವುದೇ ಸಂಬಂಧ ಇಲ್ಲಾ ಅಂದರೆ ಸುಳ್ಳು. ನಾನು ನೀಡಿದ ನೋಟಿಸ್‌ಗೆ ಆರೋಪಿ ಉತ್ತರ ನೀಡಿದ್ದ ಅದು ನನ್ನ ವಿಳಾಸ ಸರಿ ಇಲ್ಲಾ ಅಂತಾ ವಾಪಸ್ಸ ಬಂದಿರುತ್ತದೆ ಅಂದರೆ ಸಾಕ್ಷಿ ಯಾವುದೇ ಉತ್ತರದ ನೋಟಿಸ್ ನನಗೆ ಬಂದಿಲ್ಲ ಅಂತಾ ಹೇಳುತ್ತಾರೆ. ಆರೋಪಿಯ ವಿರುದ್ಧ ವಿನಾಃಕಾರಣ ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಿಡಬ್ಲ್ಯೂ-1

ನಾನು ಹಲವಾರು ಪ್ರಕರಣಗಳಲ್ಲಿ ಸಾಕ್ಷಿ ಹೇಳಿದ್ದರಿಂದ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಗೊತ್ತು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **29-07-2024**
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.